ದಿನಾಂಕಃ **17-04-2026** ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಈ ಪ್ರಕರಣದ ಮಾಲುಪಟ್ಟಿಗೆ ನಾನು ವಕೀಲರಿಗೆ ಹಾಜರುಪಡಿಸಿದ್ದು ಅವರು ತಂದು ಹಾಕಿರುತ್ತಾರೆ. ನಿಡಿ-1 ನ್ನು ಯಾವಾಗ ಮತ್ತು ಯಾರು ತಂದರು ಎಂದು ನನಗೆ ಮಾಹಿತಿ ಇಲ್ಲ. ಸದರಿ ನಿಡಿ-1 ರಲ್ಲಿ ದಿನಾಂಕ, ವರ್ಷ ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ-1 ಇದು 2011 ರ ದಾಖಲಾತಿಯಾಗಿದ್ದು ಅದನ್ನು ಈಗ ಹಾಜರುಪಡಿಸಿದ್ದೇವೆ ಅಂದರೆ ಸರಿಯಲ್ಲ. ಈ ಪ್ರಕರಣ ಇದೇ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ ಆದರೂ ಸಹ ಪ್ರಕರಣವನ್ನು ಮುಂದೂಡುವುದಕ್ಕೆ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದನೆಂದರೆ ಸರಿಯಲ್ಲ. ಈ ಪ್ರಕರಣದ ದಾವಾ ಆಸ್ತಿ ರೂ. 45 ಲಕ್ಷಕ್ಕೆ ಮೇಲ್ಪಟ್ಟು ಬೆಲೆ ಬಾಳುತ್ತದೆ ಎಂದು ನಾನು ಮಾರುಕಟ್ಟೆ ಬೆಲೆಯ ರಶೀದಿ ಹಾಜರುಪಡಿಸಿದ್ದೇನೆ. ನಾನು ಯಾವುದೇ ಮಾರುಕಟ್ಟೆ ಬೆಲೆ ರಶೀದಿ ಹಾಜರುಪಡಿಸಿಲ್ಲ ಮತ್ತು ಆ ಬಗ್ಗೆ ಸುಳ್ಳು ಹೇಳತ್ತಿದ್ದನೆಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿ ಬರುತ್ತದೆ ಎಂದು ನಾನು ಮಾರುಕಟ್ಟೆ ಬೆಲೆ ಹೆಚ್ಚಾಗುತ್ತದೆ ಎಂದು ಸುಳ್ಳು ಸಾಕ್ಷ ಹೇಳುತ್ತಿದೆನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.